ಪಿಸುಗುಟ್ಟುತ್ತಿದ್ದಳು. ಮನೆತನದ ಮರ್ಯಾದೆಯ ಜೊತೆಗೆ ನೋಡುವರ ಕಣ್ಣುಗಳಲ್ಲಿ ಅವಳ ಮರ್ಯಾದೆಯೂ, ಇದ್ದ ಒಬ್ಬ ಮಗನ ಭವಿಷ್ಯವೂ ಮಣ್ಣು ಪಾಲಾದಾವು ಎಂಬ ಭೀತಿ ಅವಳಿಗೆ. ಯಾರೇ ಮನೆಗೆ ಬಂದರೂ ನನ್ನನ್ನು ಏನೇ ಕೇಳಿದರೂ ಓಡಿ ಬಂದು ಅವಳೇ ಉತ್ತರಿಸತೊಡಗಿದಳು. ಬೆಂಗಳೂರಿನ ತಾತ ಅಜ್ಜಿ, ದೊಡ್ಡಮ್ಮಂದಿರು, ಅವರ ಮಕ್ಕಳು, ಮಾಮಂದಿರು ಬಂದಾಗ ಮೌನವಾಗಿರುತ್ತಿದ್ದ ನನ್ನನ್ನು ಕಂಡು ಎಷ್ಟೊಂದು ಪಟಪಟ ಅಂತ ಮಾತಾಡುತ್ತಿದ್ದವನು ಇದೇನೋ ಹೀಗಾಗಿದೀಯಾ.. ಮಾತು ಬರದೇ ಇರೋ ಮೂಗನ ತರಾ.. ಎಂದು ಆಶ್ಚರ್ಯ ವ್ಯಕ್ತಪಡಿಸಿದರೆ ಅಮ್ಮ ಒಳಗಿದ್ದವಳು ಓಡಿ ಬಂದು ಅಯ್ಯೋ ಬೆಳೆಯೋ ಮಕ್ಕಳು ಹೇಗಿರ್ತವೆ.. ಎಂದು ಕೃತಕ ಮುಗುಳ್ನಗೆ ಚೆಲ್ಲಿ ಮಾತು ತೇಲಿಸಿಬಿಡುತ್ತಿದ್ದಳು. ಕಣ್ಣು ಸನ್ನೆಯಲ್ಲಿಯೇ ಸೂಚನೆ ನೀಡಿ ನನ್ನನ್ನು ಎಚ್ಚರಿಸುತ್ತಿದ್ದಳು. ದೊಡ್ಡಪ್ಪನ ಬಗೆಗಿನ ಹೆದರಿಕೆ, ಎಲ್ಲಿಯೂ ಏನನ್ನೂ ಹೇಳಬೇಡಾ ಎನ್ನುವ ಅಮ್ಮನ ಗೀಳು, ಇವುಗಳಿಂದ ಭರವಸೆ, ಆತ್ಮವಿಶ್ವಾಸ ಗಳನ್ನು ತುಂಬುವವರು ಯಾರೂ ನನ್ನ ಜೊತೆಗಿಲ್ಲದೆ ನಾನು ನನ್ನ ಅಭಿಪ್ರಾಯಗಳನ್ನು ಯಾರಲ್ಲಿಯೂ ವ್ಯಕ್ತಪಡಿಸಲಾಗದಷ್ಟು ದುರ್ಬಲನಾದೆ. ಒಂಟಿಯಾದೆ. ಅಂತರ್ಮುಖಿಯಾದೆ. ಮೌನಿಯಾದೆ. ಮೂಕನೇ ಆಗಿಹೋದೆ. ಇದು ಮುಂದಿನ ನನ್ನ ಜೀವನದಲ್ಲಿಯೂ ಅತ್ಯಂತ ಗಂಭೀರ ಪರಿಣಾಮವನ್ನು ಬೀರಿತು. ನನ್ನ ಹಲವು ವಿಷಯಗಳನ್ನು ಯಾರಿಗೂ ಹೇಳದೆ (ಅಮ್ಮನಿಗೂ ಕೂಡ) ನನ್ನಲ್ಲಿಯೇ ರಹಸ್ಯವಾಗಿ ಇಟ್ಟುಕೊಳ್ಳತೊಡಗಿದೆ. ಶಾಲೆಯಲ್ಲಿಯೂ ಪರೀಕ್ಷೆಗಳಲ್ಲಿ ಪುಸ್ತಕ ಮಾತ್ರ ಓದಿಕೊಂಡು ಉತ್ತಮ ಅಂಕಗಳನ್ನು ಗಳಿಸಿ ಪಾಸಾಗುತ್ತಿದ್ದೆನೇ ಹೊರತು ಮಾಸ್ತರರು ಕೇಳುವ ಪ್ರಶ್ನೆಗಳಿಗೆ ನಾನಾಗಿಯೇ ಎದ್ದು ನಿಂತು ಉತ್ತರಿಸಲಾರದಾದೆ. ಅಂತಹ ಒಂದು ದೌರ್ಬಲ್ಯ ಚಿಕ್ಕಂದಿನಲ್ಲಿಯೇ ನನ್ನ ಮನಸ್ಸಿನಲ್ಲಿ ಉದಯವಾಯಿತು. ಬೆಳೆಯುತ್ತಾ ದೊಡ್ಡವನಾದರೂ ನಾನು ಅದರಿಂದ ಹೊರಗೆ ಬರಲು ಸಾಧ್ಯವಾಗಲೇ ಇಲ್ಲ. ಎಲ್ಲಾ ವಿಷಯಗಳನ್ನೂ ನನ್ನೊಳಗೇ ನಾನು ಕಲ್ಪಿಸಿಕೊಳ್ಳತೊಡಗಿದೆ, ಹೇಳಿಕೊಳ್ಳತೊಡಗಿದೆ. ಬೇರೆಯವರ ಬಳಿಯಲ್ಲಿ ಎಂದೂ ವ್ಯಕ್ತಪಡಿಸುತ್ತಿರಲಿಲ್ಲ.

ನಮ್ಮ ಬದುಕಿನಲ್ಲಿ ನಡೆಯಬಾರದಾಗಿದ್ದ ಆ ಒಂದು ಘಟನೆ ನಡೆದು ಒಂದೂವರೆ ವರ್ಷಗಳು ಉರುಳಿ ಹೋಗಿದ್ದವು. ಅಜ್ಜಿ, ಮನೆಯಲ್ಲಿ ಹಳಸಿ ಹೋಗಿದ್ದ ಸಂಬಂಧಗಳನ್ನು ದಿನವೂ ನೋಡಿ ಅದೇ ಚಿಂತೆಯಿಂದ ಹಾಸಿಗೆ ಹಿಡಿದಿದ್ದರು. ನಾನು ಕಂಡಂತೆ ಆ ಮೊದಲು ಎಂದೂ ಅವರ ಆರೋಗ್ಯ ಕೆಟ್ಟಿರಲಿಲ್ಲ. ಅವರು ಅಸ್ತಮಾ ರೋಗಕ್ಕೆ ತುತ್ತಾಗಿ ಆಗಾಗ ಉಸಿರಾಡಲು ತೀವ್ರ ಪ್ರಯಾಸ ಪಡತೊಡಗಿದರು. ಅಮ್ಮ ತನ್ನ ಮನಸ್ಸಿನಲ್ಲಿದ್ದ ಅಗಾಧ ನೋವನ್ನು ಮರೆತು ಪ್ರಾಮಾಣಿಕವಾಗಿ ಅಜ್ಜಿಯ ಸೇವೆ  ಮಾಡಿದರೂ ಅಜ್ಜಿಯ ಗೂರಲು ವಾಸಿಯಾಗಲಿಲ್ಲ. ಒಂದು ದಿನ ಅಜ್ಜಿ, ತನ್ನ ಗುರುತಿನ ಪತ್ರ ಬರಹಗಾರರನ್ನು ಕರೆಯಿಸಿ ದೊಡ್ಡಪ್ಪ ಮತ್ತು ಅಮ್ಮನ ಉಪಸ್ಥಿತಿಯಲ್ಲಿ ಇದ್ದ ಆಸ್ತಿಯನ್ನು ಇಬ್ಬರಿಗೂ ಪಾಲು ಮಾಡಿ ಪತ್ರ ಬರೆಯಿಸಿದರು. ಅಮ್ಮನಾಗಲೀ, ದೊಡ್ಡಪ್ಪನಾಗಲೀ ಮನೆ ಒಡೆಯುವುದು ಬೇಡವೆಂಬ ತಕರಾರು ತೆಗೆಯಲಿಲ್ಲ. ಇಬ್ಬರಿಗೂ ಮುಖ ಮುರಿಸಿಕೊಂಡು ಒಂದೇ ಮನೆಯಲ್ಲಿ ಬಾಳುವುದಕ್ಕಿಂತ ಪ್ರತ್ಯೇಕವಾಗಿ ಬದುಕುವುದು ಉತ್ತಮ ಎಂದು ಅನಿಸಿರಬೇಕು.

ಬಾಡಿಗೆ ಕೊಟ್ಟಿದ್ದ ಆರು ಮನೆಗಳಲ್ಲಿ ಮೂರು ಮನೆಗಳು ನಮ್ಮ ಪಾಲಿಗೆ ಬಂದವು. ಇರುವ ಮನೆಯನ್ನು ಭಾಗ ಮಾಡುವುದು ಬೇಡವೆಂದು ಅಮ್ಮನೇ ಹೇಳಿದ್ದರಿಂದ ಅದು ದೊಡ್ಡಪ್ಪನ ಪಾಲಾಗಿ ಸಮಸ್ಯೆ ಸುಲಭವಾಗಿ ಬಗೆಹರಿಯಿತು. ಉಳಿದಂತೆ ನಮಗೆ ನಾನೂರ ಎಂಬತ್ತು ತೆಂಗಿನ ಗಿಡಗಳಿದ್ದ ಎಂಟು ಎಕರೆ ತೋಟ, ಐದು ಎಕರೆ ಕಬ್ಬು ಮತ್ತು ಭತ್ತ ಬೆಳೆಯುತ್ತಿದ್ದ ಗದ್ದೆ, ಹಾರ್ಡ್‌ವೇರ್ ಮತ್ತು ಪೈಂಟಿನ ಅಂಗಡಿ ನಮ್ಮ ಪಾಲಿಗೆ ಬಂದವು. ಅಪ್ಪನ ಬೈಕೊಂದನ್ನು ಬಿಟ್ಟು ಬೇರೆ ಯಾವುದೇ ವಾಹನಗಳ ಗೊಡವೆಯೇ ಬೇಡವೆಂದು ಅಮ್ಮ ನೇರವಾಗಿಯೇ ನುಡಿದಿದ್ದಳು. ಎಲ್ಲಾ ಮುಗಿದಾಗ ಅಜ್ಜಿಗೆ ಯಾವುದೇ ತಂಟೆ ತಕರಾರುಗಳಿಲ್ಲದೆ  ತನ್ನ ಜವಾಬ್ದಾರಿ ಮುಗಿಸಿದೆ ಎಂದು ಸಮಾಧಾನವಾಗಿರಬೇಕು. ಎಲ್ಲರ ಎದುರಿನಲ್ಲಿಯೇ ಹಾಲಿನಲ್ಲಿದ್ದ ತಾತನ ಫೋಟೋದ ಬಳಿ ಹೋಗಿ ನಿಂತು ಕೈಮುಗಿದು ಅಡ್ಡಬಿದ್ದರು.

ಅದಾದ ಮೇಲೆ ಅಜ್ಜಿಯೇ ನಮ್ಮ ಪಾಲಿಗೆ ಬಂದಿದ್ದ ಒಂದು ಬಾಡಿಗೆ ಮನೆಯನ್ನು ಖಾಲಿ ಮಾಡಿಸಿಕೊಟ್ಟರು. ನನ್ನ ಮತ್ತು ಅಮ್ಮನ ವಾಸ್ತವ್ಯ ಆ ಮನೆಗೆ ಬದಲಾಯಿತು. ಆ ಮನೆಗೆ ಬಂದ ದಿನ ಅಮ್ಮನ ಮುಖದಲ್ಲಿ ಇನ್ನಿಲ್ಲದ ಸಂತೋಷ ಅರಳಿ ನಿಂತಿತ್ತು. ಯಾವುದೋ ಬಂಧನದಿಂದ ಮುಕ್ತಗೊಂಡವಳಂತೆ ಅಮ್ಮ ಹಿಗ್ಗಿ ಹಿಗ್ಗಿ ನಲಿಯುತ್ತಿದ್ದಳು. ಬರುವಾಗ ಅಲ್ಲಿಂದ ನಾವು ಮಲಗುತ್ತಿದ್ದ ಹಾಸಿಗೆ ಹೊದಿಕೆ ಮತ್ತು ಮಂಚವನ್ನು ಹೊರತುಪಡಿಸಿ ಬೇರೆ ಏನನ್ನೂ ತರಲಿಲ್ಲ. ಅಮ್ಮ ನಮ್ಮ ಪಾಲಿಗೆ ಬಂದಿದ್ದ ಬ್ಯಾಂಕಿನಲ್ಲಿದ್ದ ನಗದು ಹಣದಿಂದ ಎಲ್ಲಾ ಹೊಸ ಹೊಸ ಸಾಮಾನು ಸರಂಜಾಮುಗಳನ್ನು ಒಂದೊಂದಾಗಿ ಕೊಂಡು ತಂದು ಮನೆ ತುಂಬಾ ಅಚ್ಚುಕಟ್ಟಾಗಿ ಜೋಡಿಸಿದಳು. ನಮ್ಮ ಮನೆಗೆ ಹೊಸ ಲ್ಯಾಂಡ್ ಫೋನು ಬಂದಿತು.

ಆ ಮನೆಗೆ ಬಂದ ಮೇಲೆ ನನಗೆ ವೈಯುಕ್ತಿಕವಾಗಿ ಎರಡು ಲಾಭಗಳು ಆದವು. ಮೊದಲನೆಯದಾಗಿ ಪ್ರತಿದಿನವೂ ಹೆದರಿಕೆಯಿಂದ ದೊಡ್ಡಪ್ಪನ ದೃಷ್ಟಿಗೆ ಬೀಳದಂತೆ ಓಡಾಡುತ್ತಿದ್ದ ನನಗೆ ಅದರಿಂದ ಮುಕ್ತಿ ದೊರಕಿತು. ಎರಡನೆಯದಾಗಿ ಹೇಮಾಳ ಮನೆ ನಮ್ಮ ಮನೆಯ ಹಿಂದಿನ ರಸ್ತೆಯಲ್ಲಿಯೇ ಇದ್ದಿತು. ಮನೆಯ ತಾರಸಿಯ ಮೇಲೆ ಹೋದರೆ ಅವರ ಮನೆ ನಿಚ್ಚಳವಾಗಿ ಕಾಣಿಸುತ್ತಿತ್ತು. ಅವಳು ಬೆಳಗಿನ ಹೊತ್ತು ಬೀದಿಯಲ್ಲಿದ್ದ ನಲ್ಲಿಯಲ್ಲಿ ನೀರು ಹಿಡಿದುಕೊಂಡು ಹೋಗುವಾಗ, ಶಾಲೆಗೆ ಹೊರಟಾಗ, ರಾತ್ರಿಯ ಹೊತ್ತು ಅವರ ಅಮ್ಮ ಅಪ್ಪನೊಂದಿಗೆ ಅವರ ಮನೆಯ ಪಡಸಾಲೆಯಲ್ಲಿ ಕುಳಿತಾಗ ನಾನು ಅವಳನ್ನು ನೋಡಬಹುದಿತ್ತು. ಹಾಗೆ ನೋಡುತ್ತಲೇ ನಾನು ಅವಳನ್ನು ನನ್ನ ಕನಸು ಮನಸ್ಸಿನೊಳಗೆ ಸಂಪೂರ್ಣವಾಗಿ ತುಂಬಿಕೊಂಡುಬಿಟ್ಟೆ. ಅವಳು ನನ್ನ ಕಣ್ಣೆದುರಿಗೆ ಬೆಳೆಯುತ್ತಲೇ ಯೌವ್ವನಕ್ಕೆ ಬಂದ ಒಂದು ಸುಂದರ ಹೆಣ್ಣಾಗಿ ರೂಪುಗೊಂಡಳು.

ಅವರ ತಂದೆ ಅಮ್ಮನನ್ನು ಮಾತನಾಡಿಸಿಕೊಂಡು ಹೋಗಲು ಆಗಾಗ ನಮ್ಮ ಮನೆಗೆ ಬರುತ್ತಿದ್ದರು. ಹೇಮಾ ಈಗ ಅವರ ಜೊತೆ ಬರುತ್ತಿರಲಿಲ್ಲ. ಆದರೆ ಅವಳು ಸಂಕ್ರಾಂತಿ ಹಬ್ಬದ ದಿನ ಪ್ರತಿವರ್ಷವೂ ಅಂದವಾಗಿ ಅಲಂಕರಿಸಿಕೊಂಡು ಎಳ್ಳು ಬೀರಲು ನಮ್ಮ ಮನೆಗೆ ಬಂದೇ ಬರುತ್ತಿದ್ದಳು. ನಾನು ಆ ದಿನ ಅದಕ್ಕಾಗಿಯೇ ಕಾಯ್ದು ಕುಳಿತಿರುತ್ತಿದ್ದೆ. ಅವಳು ನನ್ನನ್ನು ಎಲ್ಲಿ ನೋಡಿದರೂ ಒಂದು ಮುಗುಳ್ನಗೆಯನ್ನಂತೂ ನೀಡುತ್ತಿದ್ದಳು. ನನ್ನ ಬಗ್ಗೆ ಅವಳಿಗೆ ಒಲವಿತ್ತೋ ಇಲ್ಲವೋ ನನಗೆ ತಿಳಿದಿರಲಿಲ್ಲ. ನಾನು ಮಾತ್ರ ಅವಳನ್ನು ತೀವ್ರವಾಗಿ ಪ್ರೀತಿಸ ತೊಡಗಿದೆ. ಆದರೆ ನನ್ನ ಪ್ರೀತಿಯನ್ನು ಅವಳೊಂದಿಗೆ ವ್ಯಕ್ತಪಡಿಸುವ ಧೈರ್ಯ ಎಂದೂ ನನಗಾಗಲಿಲ್ಲ.

ನಾವು ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿದ ನಂತರ ಅಮ್ಮ ತನ್ನ ಮನಸ್ಥಿತಿಯನ್ನು ಬದಲಾಯಿಸಿಕೊಂಡು ಮನೆ, ವ್ಯಾಪಾರ, ಕೃಷಿ ಎಲ್ಲವನ್ನೂ ಅಜ್ಜಿಯಂತೆ ಯಶಸ್ವಿಯಾಗಿ ನಿರ್ವಹಿಸುವ ಪರಿಣತಿಯನ್ನು ಗಳಿಸಿದಳು. ನಮ್ಮ ಪೈಂಟ್ ಮತ್ತು ಹಾರ್ಡ್‌ವೇರ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರಿಗೆ ಒಳ್ಳೆಯ ಸಂಬಳ, ಬಟ್ಟೆಬರೆ ನೀಡಿ ಅವರ ವಿಶ್ವಾಸವನ್ನು ಗಳಿಸಿಕೊಳ್ಳುವಲ್ಲಿ ಸಫಲಳಾದಳು. ಆ ಅಂಗಡಿ ಅಮ್ಮನ ಉಸ್ತುವಾರಿಗೆ ಬಂದ ಮೂರೇ ವರ್ಷಗಳಲ್ಲಿ ವ್ಯಾಪಾರವೂ ವೃದ್ಧಿಯಾಗಿ ಕಟ್ಟಡವೂ ವಿಸ್ತಾರಗೊಂಡು ನಮ್ಮ ಪಟ್ಟಣದಲ್ಲಿಯೇ ಗುಣಮಟ್ಟದ ಹಾರ್ಡ್‌ವೇರ್ ಅಂಗಡಿ ಎಂಬ ಹೆಸರಿನೊಂದಿಗೆ ಖ್ಯಾತಿಯನ್ನು ಪಡೆಯಿತು. ಕೃಷಿಯನ್ನೂ ಅಮ್ಮ ಕಡೆಗಣಿಸಲಿಲ್ಲ. ಅಲ್ಲಿನ ಆಳುಕಾಳುಗಳಿಗೆ ಕೈತುಂಬಾ ಕೂಲಿ ನೀಡಿ, ಅವರಿಗೆ ಅವಶ್ಯವಿದ್ದಾಗ ಹಿಂದೆಮುಂದೆ ನೋಡದೆ ಮುಂಗಡ ಹಣ ಕೊಡುತ್ತಿದ್ದಳು. ಇದರಿಂದಾಗಿ ನಮ್ಮ ತೋಟಗದ್ದೆಗಳೂ ಯಾವಾಗಲೂ ಹಸಿರು ತುಂಬಿಕೊಂಡು ಉತ್ತಮ ಫಸಲು ನೀಡುತಿದ್ದವು.

ಬೆಂಗಳೂರಿನ ತಾತ ಅಜ್ಜಿ ಆಗಾಗ ಬಂದು ನಮ್ಮ ಮನೆಯಲ್ಲಿದ್ದು ಅಮ್ಮನಿಗೆ ಸಲಹೆ ಸೂಚನೆ ನೀಡಿ ಹೋಗುತ್ತಿದ್ದರು, ಅಮ್ಮ ಬೆಂಗಳೂರಿನ ತಾತನ ಸಲಹೆಯ ಮೇರೆಗೆ ಅಲ್ಲಿ ಎರಡು ದೊಡ್ಡ ನಿವೇಶನಗಳನ್ನು ಕೊಂಡು ಕೊಂಡಳು.  ಬೇಸಿಗೆಯ ಶಾಲಾ ರಜೆ ದಿನಗಳಲ್ಲಿ ದೊಡ್ಡಮ್ಮಂದಿರು, ಅವರ ಮಕ್ಕಳು, ಮಾಮಂದಿರ ಮಕ್ಕಳು ನಮ್ಮ ಮನೆಗೆ ಬಂದು ಎರಡು ಮೂರು ವಾರಗಳಿದ್ದು ಹೋಗುತ್ತಿದ್ದರು. ಆಗೆಲ್ಲಾ ನಮ್ಮ ಮನೆ ಮಕ್ಕಳಿಂದ ತುಂಬಿ ತುಳುಕುತಿತ್ತು. ನಾನು ಮಾತ್ರ ಎಲ್ಲರೊಂದಿಗಿದ್ದರೂ ಏನೊಂದೂ ಮಾತನಾಡದೇ ಮೂಗನಾಗಿಯೇ ಇರುತ್ತಿದ್ದೆ. ಅಷ್ಟು ಹೊತ್ತಿಗೆ ಅವನು ಹಾಗೆಯೇ  ಎಂದು ಎಲ್ಲರೂ ನನ್ನ ವರ್ತನೆಯನ್ನು ಒಪ್ಪಿಕೊಂಡು ಬಿಟ್ಟಿದ್ದರು.

(ಸಶೇಷ)